# 2010

## HISTORY

## Paper 1

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* ***three*** *questions in Part D.*

SEAL

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

4×5=20

*Answer each question in about 50 words. Each question carries 5 marks.*

1. (a) What are the forms of properties and activities of production mentioned in the early Vedic literature ?

   (b) Bring out the features of trade and urbanization in the Gangetic valley in the middle of the first millennium B.C.

   (c) What were the major conquests of Muhammad Tughluq ?

   (d) What were the consequences of the Third Battle of Panipat ?

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

1. (ಎ) ಆರಂಭದ ವೇದಕಾಲೀನ ಸಾಹಿತ್ಯದಲ್ಲಿ ಯಾವ ಯಾವ ಪ್ರಕಾರದ ಸಂಪತ್ತುಗಳನ್ನು ಹಾಗೂ ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ಹೇಳಲಾಗಿದೆ ?

   (ಬಿ) ಕ್ರಿ.ಪೂ. ಮೊದಲ ಸಹಸ್ರಾಬ್ದದ ಮಧ್ಯಕಾಲದಲ್ಲಿ ಗಂಗಾ ನದಿ ಕಣಿವೆಯಲ್ಲಿ ನಡೆಯುತ್ತಿದ್ದ ವ್ಯಾಪಾರ ಹಾಗೂ ನಗರೀಕರಣದ ಸ್ವರೂಪವನ್ನು ವಿವರಿಸಿ.

   (ಸಿ) ಮೊಹಮದ್ ತುಘಲಕ್‌ನ ಪ್ರಮುಖ ದಿಗ್ವಿಜಯಗಳು ಯಾವುವು ?

   (ಡಿ) ಮೂರನೇ ಪಾಣಿಪತ್ ಯುದ್ಧದ ಅನಂತರದ ಪರಿಣಾಮಗಳೇನು ?

## PART B

*10×10=100*

*Answer each question in about 100 words. Each question carries 10 marks.*

**2.** Give an account of the trade contacts that the Harappan Civilization had with the Westerly world.

**3.** What were the factors responsible for the fall of the Mauryan Empire ?

**4.** How can 'Sangam Literature' help in reconstructing the history of the dynasties of South India in the early centuries of the Common Era ?

**5.** How did Sanskrit literature fare under the Gupta dynasty ?

**6.** Bring out the important features of Pallava architecture with special reference to the cave and structural temples.

**7.** Do you agree with the view that trade and urbanism suffered a set-back in the early medieval period ?

**8.** To what extent was the Ghorian conquest of northern India a 'walk-over' ?

**9.** Describe the contents of *Din-Ilahi* and bring out its political and social aspects.

**10.** Account for the break-up of the Vijayanagara Empire.

**11.** Give an account of the revenue administration of the Marathas.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** ಹರಪ್ಪಾ ನಾಗರಿಕತೆಯು ಪಾಶ್ಚಾತ್ಯ (Westerly) ಜಗತ್ತಿನೊಂದಿಗೆ ಹೊಂದಿದ್ದ ವ್ಯಾಪಾರ ಸಂಪರ್ಕಗಳನ್ನು ಕುರಿತು ಬರೆಯಿರಿ.

**3.** ಮೌರ್ಯ ಸಾಮ್ರಾಜ್ಯದ ಪತನಕ್ಕೆ ಕಾರಣವಾದ ಅಂಶಗಳು ಯಾವುವು ?

**4.** ಸಾಮಾನ್ಯ ಶಕೆಯ ಪ್ರಾರಂಭದ ಶತಮಾನಗಳಲ್ಲಿನ ದಕ್ಷಿಣ ಭಾರತದ ರಾಜವಂಶಗಳ ಇತಿಹಾಸವನ್ನು ಪುನರ್ರಚಿಸುವುದಕ್ಕೆ "ಸಂಗಂ ಸಾಹಿತ್ಯವು" ಹೇಗೆ ಸಹಾಯಕವಾಗಿದೆ ?

**5.** ಗುಪ್ತ ರಾಜವಂಶದ ಕಾಲದಲ್ಲಿ ಸಂಸ್ಕೃತ ಸಾಹಿತ್ಯದ ಸ್ಥಾನಮಾನ ಹೇಗಿದ್ದಿತು ?

**6.** ಗುಹಾದೇವಾಲಯಗಳು ಮತ್ತು ಕಟ್ಟಡ ದೇವಾಲಯಗಳನ್ನು ವಿಶೇಷ ಗಮನದಲ್ಲಿಟ್ಟುಕೊಂಡು ಪಲ್ಲವರ ವಾಸ್ತು ಶಿಲ್ಪಶೈಲಿಯ ಮುಖ್ಯ ಲಕ್ಷಣಗಳನ್ನು ವಿವರಿಸಿ.

**7.** ಮಧ್ಯಕಾಲೀನ ಯುಗದ ಮೊದಲ ಭಾಗದಲ್ಲಿ ವ್ಯಾಪಾರ ಮತ್ತು ನಗರೀಕರಣ ಪ್ರಕ್ರಿಯೆಗಳಿಗೆ ಹಿನ್ನಡೆ ಉಂಟಾಯಿತು ಎಂಬ ಅಭಿಪ್ರಾಯವನ್ನು ನೀವು ಒಪ್ಪುತ್ತೀರಾ ?

**8.** ಘೋರಿಯ ಉತ್ತರ ಭಾರತ ದಿಗ್ವಿಜಯವು ಎಷ್ಟರ ಮಟ್ಟಿಗೆ ಒಂದು "ಅನಾಯಾಸ ವಿಜಯ" ವಾಗಿತ್ತು ?

**9.** 'ದೀನ್ ಇಲಾಹಿ' ಕೃತಿಯ ವಿಷಯಗಳೇನು ಎಂಬುದನ್ನು ವಿವರಿಸಿ ಮತ್ತು ಅದರ ರಾಜಕೀಯ ಹಾಗೂ ಸಾಮಾಜಿಕ ಅಂಶಗಳನ್ನು ತಿಳಿಸಿ.

**10.** ವಿಜಯನಗರ ಸಾಮ್ರಾಜ್ಯವು ಕುಸಿದು ಬೀಳುವುದಕ್ಕೆ ಕಾರಣವೇನು ? ವಿವರಿಸಿ.

**11.** ಮರಾಠರ ರೆವಿನ್ಯೂ ಆಡಳಿತವನ್ನು ಕುರಿತು ವಿವರಿಸಿ.

## PART C

*6×15=90*

*Answer each question in about 150 words. Each question carries 15 marks.*

**12.** Discuss the major tenets of Buddhism, placing them in the socio-economic context within which they emerged.

**13.** Write a short essay on education and learning in India under the Guptas.

**14.** Examine the features of local government in South India with particular reference to the Chola experience.

**15.** To what extent did the administrative and economic reforms introduced by Alauddin Khilji influence the life of the people ?

**16.** Bring out the importance of Bhakti Movements in Medieval India.

**17.** Is it justifiable to describe the second millennium as "vernacular millennium" ? Discuss in the light of the growth of regional languages and literature.

## ಭಾಗ C 

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಬೌದ್ಧಧರ್ಮದ ಮುಖ್ಯ ತತ್ವಗಳನ್ನು ಕುರಿತಂತೆ ಅವು ಯಾವ ಸಮಾಜೋ ಆರ್ಥಿಕ ಸಂದರ್ಭದಲ್ಲಿ ಹುಟ್ಟಿಕೊಂಡವು ಎಂಬುದರ ಹಿನ್ನೆಲೆಯಲ್ಲಿಟ್ಟು ಕೊಂಡು ಚರ್ಚಿಸಿ.

**13.** ಗುಪ್ತರ ಆಳ್ವಿಕೆಯಡಿಯಲ್ಲಿ ಭಾರತದಲ್ಲಿದ್ದ ಶಿಕ್ಷಣ ಮತ್ತು ಜ್ಞಾನಾರ್ಜನೆಯ ವ್ಯವಸ್ಥೆಯ ಬಗ್ಗೆ ಒಂದು ಸಂಕ್ಷಿಪ್ತ ಪ್ರಬಂಧ ಬರೆಯಿರಿ.

**14.** ಚೋಳರ ಆಡಳಿತ ವ್ಯವಸ್ಥೆಯ ವಿಶೇಷ ಉಲ್ಲೇಖದೊಂದಿಗೆ ದಕ್ಷಿಣ ಭಾರತದಲ್ಲಿದ್ದ ಸ್ಥಳೀಯ ಆಡಳಿತವ್ಯವಸ್ಥೆಯ ಲಕ್ಷಣಗಳನ್ನು ಪರಿಶೀಲಿಸಿ.

**15.** ಅಲ್ಲಾಉದ್ದೀನ್ ಖಿಲ್ಜಿಯು ಜಾರಿಗೊಳಿಸಿದ ಆಡಳಿತಾತ್ಮಕ ಹಾಗೂ ಆರ್ಥಿಕ ಸುಧಾರಣೆಗಳು ಎಷ್ಟರಮಟ್ಟಿಗೆ ಜನರ ಬದುಕಿನ ಮೇಲೆ ಪ್ರಭಾವ ಬೀರಿದವು ?

**16.** ಮಧ್ಯ ಕಾಲೀನ ಭಾರತದ ಭಕ್ತಿ ಮಾರ್ಗದ ಚಳುವಳಿಗಳ ಪ್ರಾಮುಖ್ಯತೆಯನ್ನು ವಿವರಿಸಿ.

**17.** ಎರಡನೇ ಸಹಸ್ರಾಬ್ದವನ್ನು "ಆಡುಭಾಷೆಗಳ ಸಹಸ್ರಾಬ್ದ"ಎಂದು ಕರೆಯುವುದು ಸಮರ್ಥನೀಯವೆ ? ಪ್ರಾದೇಶಿಕ ಭಾಷೆಗಳು ಮತ್ತು ಅವುಗಳ ಸಾಹಿತ್ಯದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಚರ್ಚಿಸಿ.

## PART D

3×30=90

*Answer any **three** questions in about 300 words each. Each question carries 30 marks.*

**18.** Write an essay on Mauryan polity, summarising the debate on the nature of the Mauryan state.

**19.** Give an account of the contributions of the Rashtrakutas to art, architecture and culture.

**20.** Examine the process of the growth of trade and the rise and revival of urban centres during the time of the Sultanate of Delhi. Is the notion of an 'urban revolution' valid in this context ?

**21.** Is it true that the Vijayanagara Empire was established as a bulwark against the expansion of Islam to South India ? Answer with special reference to the Empire's relations with both its 'Hindu' neighbours and 'Muslim' subjects.

**22.** Write an essay on Mughal administration with special reference to *Mansabdari* and *Jagirdari* systems.

13/2

# 2010

## HISTORY

### Paper 2

*Time : 3 Hours ]* *[ Maximum Marks : 300*

## INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* ***compulsory****.*
*Answer any* ***three*** *questions in Part D.*

SEAL

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ಭಾಷಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*4×5=20*

*Answer each question in about 50 words. Each question carries 5 marks.*

1. (a) Mention the conditions of the restoration of Mysore.

   (b) What were the implications of INA trials to the Freedom Struggle in India ?

   (c) To what extent was the slavery question responsible for the Civil War in America ?

   (d) Can the Great Depression and World War II be linked causally ?

## ಭಾಗ A

*4×5=20*

*ಎಲ್ಲ ಪ್ರಶ್ನೆಗಳಿಗೂ ತಲಾ 50 ಪದಗಳಿಗೆ ಮೀರದಂತೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಮೈಸೂರಿನ ಪುನರ್ ಸ್ಥಾಪನೆಯ ಷರತ್ತುಗಳನ್ನು ಕುರಿತು ಬರೆಯಿರಿ.

(ಬಿ) ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮೇಲೆ INA ವಿಚಾರಣೆಗಳಿಂದಾದ ಪರಿಣಾಮಗಳೇನು ?

(ಸಿ) ಗುಲಾಮಗಿರಿ ಪದ್ಧತಿಯು ಎಷ್ಟರ ಮಟ್ಟಿಗೆ ಅಮೆರಿಕಾದಲ್ಲಿಯ ಆಂತರಿಕ ಯುದ್ಧಕ್ಕೆ ಕಾರಣವಾಯಿತು.

(ಡಿ) ಮಹಾಕುಸಿತ ಮತ್ತು ದ್ವಿತೀಯ ಮಹಾಯುದ್ಧಗಳ ನಡುವೆ ಕಾರಣೀಭೂತ ಸಂಬಂಧ ಕಲ್ಪಿಸಬಹುದೆ ?

[Turn over

## PART B

*10×10=100*

*Answer each question in about 100 words. Each question carries 10 marks.*

**2.** Trace the stages in which the British established their power in Bengal in the $18^{th}$ century.

**3.** How can the revenue and judicial changes introduced by the English East India Company in India be linked to the colonial interests of Great Britain ?

**4.** Give an account of the work of Periyar E.V. Ramaswami Naicker and show how it can be located within the parameters of 'Indian Renaissance'.

**5.** Assess the role of peasant participation in the Revolt of 1857.

**6.** Form an estimate of the performance of the Congress ministries (1937 – 39).

**7.** How far did the absolutist phase represent the transition from feudalism to capitalism in early modern Europe ?

**8.** Discuss the features of Scientific Revolution.

**9.** Why is the French Revolution of 1789 called a 'Bourgeois Revolution' ?

**10.** How did Europe get aligned into two rival camps by early $20^{th}$ century ?

**11.** What is meant by Cold War ?

## ಭಾಗ B

*10×10=100*

*ಎಲ್ಲ ಪ್ರಶ್ನೆಗಳಿಗೂ ಉತ್ತರಿಸಿ. ಪ್ರತಿಯೊಂದು ಉತ್ತರ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**2.** 18ನೇ ಶತಮಾನದಲ್ಲಿ ಬ್ರಿಟಿಷರು ಬಂಗಾಳದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದ ಹಂತಗಳನ್ನು ಗುರುತಿಸಿ.

**3.** ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿ ಜಾರಿಗೊಳಿಸಿದ ರೆವಿನ್ಯೂ ಮತ್ತು ನ್ಯಾಯಾಂಗ ವ್ಯವಸ್ಥೆಯ ಬದಲಾವಣೆಗಳಿಗೂ ಗ್ರೇಟ್ ಬ್ರಿಟನ್ನಿನ ವಸಾಹತುಶಾಹಿ ಹಿತಾಸಕ್ತಿಗಳಿಗೂ ಹೇಗೆ ಸಂಬಂಧ ಕಲ್ಪಿಸಬಹುದು ?

**4.** ಪೆರಿಯಾರ್ ಇ.ವಿ. ರಾಮಸ್ವಾಮಿ ನಾಯಕರ್ ರವರ ಸಾಧನೆಗಳನ್ನು ವಿವರಿಸಿ. "ಭಾರತದ ಪುನರುಜ್ಜೀವನ"ದ ಪರಿಧಿಯೊಳಗೆ ಈ ಸಾಧನೆಗಳ ಸ್ಥಾನವನ್ನು ಹೇಗೆ ಗುರುತಿಸಬಹುದು ಎಂದು ನಿರೂಪಿಸಿ.

**5.** 1857ರ ದಂಗೆಯಲ್ಲಿ ರೈತಾಪಿ ಜನರ ಸಹಭಾಗಿತ್ವದ ಪಾತ್ರ ಕುರಿತಂತೆ ವಿವೇಚಿಸಿ.

**6.** ಕಾಂಗ್ರೆಸ್ ಸಚಿವಾಡಳಿತಗಳ (1937 – 39) ಕಾರ್ಯ ನಿರ್ವಹಣೆಯನ್ನು ಮೌಲ್ಯಮಾಪನ ಮಾಡಿ.

**7.** ಆಧುನಿಕ ಯೂರೋಪಿನ ಪ್ರಾರಂಭಕಾಲದಲ್ಲಿ ನಿರಂಕುಶ ಪ್ರಭುತ್ವವಾದಿ ಹಂತವು (Absolutist Phase) ಎಷ್ಟರ ಮಟ್ಟಿಗೆ ಊಳಿಗಮಾನ್ಯಶಾಹಿಯಿಂದ ಬಂಡವಾಳಶಾಹಿಗೆ ನಡೆದ ಸ್ಥಿತ್ಯಂತರವನ್ನು ಪ್ರತಿನಿಧಿಸುತ್ತದೆ ?

**8.** ವೈಜ್ಞಾನಿಕ ಕ್ರಾಂತಿಯ ಲಕ್ಷಣಗಳನ್ನು ಕುರಿತು ಚರ್ಚಿಸಿ.

**9.** 1789ರ ಫ್ರೆಂಚ್ ಕ್ರಾಂತಿಯನ್ನು ಯಾಕೆ "ಬೂರ್ಜ್ವಾ ಕ್ರಾಂತಿ" ಎಂದು ಕರೆಯುತ್ತಾರೆ ?

**10.** 20ನೇ ಶತಮಾನದ ಆರಂಭದಲ್ಲಿ ಯೂರೋಪ್ ದೇಶಗಳು ಹೇಗೆ ಎರಡು ವಿರೋಧಿ ಬಣಗಳೊಂದಿಗೆ ಸೇರಿಕೊಂಡವು ?

**11.** ಶೀತಲ ಸಮರ ಎಂದರೇನು ?

[Turn over

## PART C

*6×15=90*

*Answer each question in about 150 words. Each question carries 15 marks.*

**12.** Assess the role of civil rebellions in India's struggle for freedom. To what extent were they autonomous ?

**13.** What is meant by 'Paramountcy' ? How did it work in India in the period after 1857 ?

**14.** Assess the performance of backward classes' movements in Karnataka.

**15.** How did mercantilism work as the background for European imperialism ?

**16.** Write a short essay on German idealism with special reference to Hegel.

**17.** Estimate the role of Lenin in the history of modern Russia.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**12.** ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾಗರಿಕ ಬಂಡಾಯಗಳ ಪಾತ್ರ ಕುರಿತು ವಿಮರ್ಶಿಸಿ. ಅವು ಎಷ್ಟರ ಮಟ್ಟಿಗೆ ಸ್ವತಂತ್ರ ಬಂಡಾಯಗಳಾಗಿದ್ದವು ?

**13.** 'ಸಾರ್ವಭೌಮತೆ' (Paramountcy) ಎಂದರೇನು ? ಭಾರತದಲ್ಲಿ, 1857ರ ನಂತರದ ಅವಧಿಯಲ್ಲಿ ಇದು ಹೇಗೆ ಕೆಲಸಮಾಡಿತು ?

**14.** ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಚಳುವಳಿಗಳ ಸಾಧನೆಗಳನ್ನು ಕುರಿತು ವಿವೇಚಿಸಿ.

**15.** ಯೂರೋಪಿನ ಸಾಮ್ರಾಜ್ಯಶಾಹಿಗೆ ವ್ಯಾಪಾರ ಪ್ರವೃತ್ತಿಯು ಹೇಗೆ ಹಿನ್ನೆಲೆಯಾಗಿ ಕೆಲಸಮಾಡಿದೆ ಎಂಬುದನ್ನು ವಿವರಿಸಿ.

**16.** ಹೆಗೆಲ್‌ನ ವಿಶೇಷ ಉಲ್ಲೇಖದೊಂದಿಗೆ ಜರ್ಮನಿಯ ಆದರ್ಶವಾದವನ್ನು ಕುರಿತು ಕಿರು ಪ್ರಬಂಧ ಬರೆಯಿರಿ.

**17.** ಆಧುನಿಕ ರಷ್ಯಾದ ಇತಿಹಾಸದಲ್ಲಿ ಲೆನಿನ್ ಪಾತ್ರ ಕುರಿತು ವಿವೇಚಿಸಿ.

## PART D

*3×30=90*

*Answer any* ***three*** *questions in about 300 words each. Each question carries 30 marks.*

**18.** Summarise the economic critique of colonialism on which the early leaders of Indian nationalism based themselves.

**19.** What were the strategies of India's struggle for freedom ? Do you agree with the 'struggle-truce-struggle' scheme ?

**20.** Analyse the contribution of the left movements towards the winning of India's freedom.

**21.** Analyse the working of nationalism in Europe, taking the case of the unification of Italy as illustration.

**22.** Account for the failure of the League of Nations.

## ಭಾಗ D

*3×30=90*

*ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯ ಉತ್ತರ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 30 ಅಂಕಗಳು.*

**18.** ಭಾರತದ ರಾಷ್ಟ್ರೀಯತೆಯ ಆರಂಭದ ನಾಯಕರು ತಮ್ಮ ಹೋರಾಟಕ್ಕೆ ನೆಲೆಯಾಗಿಸಿಕೊಂಡ ವಸಾಹತುಶಾಹಿ ಆರ್ಥಿಕ ನೀತಿಯನ್ನು ಕುರಿತ ವಿಮರ್ಶೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಿ.

**19.** ಭಾರತದ ಸ್ವಾತಂತ್ರ್ಯ ಸಂಗ್ರಾಮದ ತಂತ್ರೋಪಾಯಗಳು ಯಾವುವು ? "ಹೋರಾಟದಿಂದ ಹೋರಾಟವನ್ನು ನಿಲ್ಲಿಸುವ" ಯೋಜನೆಯನ್ನು ನೀವು ಒಪ್ಪುತ್ತೀರಾ ?

**20.** ಭಾರತವನ್ನು ಸ್ವಾತಂತ್ರ್ಯಗೊಳಿಸುವುದಕ್ಕೆ ಎಡಪಂಥೀಯ ಚಳುವಳಿಗಳು ನೀಡಿದ ಕೊಡುಗೆಯನ್ನು ವಿಶ್ಲೇಷಿಸಿ.

**21.** ಇಟಲಿಯ ಏಕೀಕರಣ ಸಂದರ್ಭವನ್ನು ನಿದರ್ಶನವಾಗಿಟ್ಟುಕೊಂಡು, ಯೂರೋಪಿನಲ್ಲಿ ರಾಷ್ಟ್ರೀಯತೆ ಹೇಗೆ ಕಾರ್ಯ ನಿರ್ವಹಿಸಿತು ಎಂಬುದನ್ನು ವಿಶ್ಲೇಷಿಸಿ.

**22.** ಲೀಗ್ ಆಫ್ ನೇಶನ್ಸ್ ನ ವಿಫಲತೆಗೆ ಕಾರಣಗಳೇನು ? ವಿವರಿಸಿರಿ.

# 2010

## ಇತಿಹಾಸ

## ಪ್ರಶ್ನೆಪತ್ರಿಕೆ 2

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

**ಸೂಚನೆಗಳು**

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.*

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

*ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.*

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.*

***Note :*** *The English version of the instructions is printed on the front cover of this question paper.*

SEAL

## ಭಾಗ D

*3×30=90*

*ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಪ್ರಶ್ನೆಯ ಉತ್ತರ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 30 ಅಂಕಗಳು.*

**18.** ಮೌರ್ಯರ ರಾಜ್ಯ ಸ್ವರೂಪವನ್ನು ಕುರಿತ ಚರ್ಚೆಯ ಸಾರಾಂಶವನ್ನು ತಿಳಿಸುತ್ತ ಮೌರ್ಯರ ರಾಜ್ಯಾಡಳಿತ ವ್ಯವಸ್ಥೆಯ ಬಗ್ಗೆ ಒಂದು ಪ್ರಬಂಧ ಬರೆಯಿರಿ.

**19.** ಕಲೆ, ವಾಸ್ತುಶಿಲ್ಪ ಮತ್ತು ಸಂಸ್ಕೃತಿಗಳಿಗೆ ರಾಷ್ಟ್ರಕೂಟರ ಕೊಡುಗೆಗಳೇನು ಎಂಬುದನ್ನು ವಿವರವಾಗಿ ನಿರೂಪಿಸಿ.

**20.** ದೆಹಲಿಯ ಸುಲ್ತಾನರ ರಾಜ್ಯಭಾರ ಕಾಲದಲ್ಲಿ ವ್ಯಾಪಾರವು ಬೆಳೆದುಬಂದ ಬಗೆ ಹಾಗೂ ನಗರ ಕೇಂದ್ರಗಳ ಉದಯ ಮತ್ತು ಪುನರುಜ್ಜೀವನ ಪ್ರಕ್ರಿಯೆ ಯಾವ ರೀತಿ ಇತ್ತು ಎಂಬುದನ್ನು ಪರಿಶೀಲಿಸಿ. "ನಗರ ಕ್ರಾಂತಿ" ಎಂಬ ಪರಿಕಲ್ಪನೆ ಈ ಸಂದರ್ಭಕ್ಕೆ ಅನ್ವಯಿಸುವುದೆ ?

**21.** ಇಸ್ಲಾಂಧರ್ಮವು ದಕ್ಷಿಣ ಭಾರತಕ್ಕೆ ವಿಸ್ತರಿಸದಂತೆ ತಡೆಯುವ ರಕ್ಷಣಾ ಕೊತ್ತಳವಾಗಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಲಾಯಿತು ಎಂಬುದು ನಿಜವೆ ? ಈ ಸಾಮ್ರಾಜ್ಯವು ತನ್ನ 'ಹಿಂದೂ' ನೆರೆಹೊರೆಯವರೊಂದಿಗೆ ಹಾಗೂ 'ಮುಸ್ಲಿಂ' ಪ್ರಜೆಗಳೊಂದಿಗೆ ಹೊಂದಿದ್ದಂತಹ ಸಂಬಂಧವನ್ನು ವಿಶೇಷವಾಗಿ ಗಮನದಲ್ಲಿರಿಸಿ ನಿಮ್ಮ ಉತ್ತರವನ್ನು ಬರೆಯಿರಿ.

**22.** ಮನ್‌ಸಬ್ದಾರಿ ಮತ್ತು ಜಾಗೀರ್‌ದಾರಿ ಪದ್ಧತಿಗಳ ವಿಶೇಷ ಉಲ್ಲೇಖದೊಂದಿಗೆ ಮೊಘಲ್ ಆಡಳಿತ ವ್ಯವಸ್ಥೆ ಕುರಿತು ಒಂದು ಪ್ರಬಂಧವನ್ನು ಬರೆಯಿರಿ.

# 2010

## ಇತಿಹಾಸ

## ಪ್ರಶ್ನೆಪತ್ರಿಕೆ 1

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 300*

### ಸೂಚನೆಗಳು

*ಪ್ರತಿ ಪ್ರಶ್ನೆಯನ್ನು ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಮುದ್ರಿಸಲಾಗಿದೆ.*

*ನಿಮ್ಮ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಮಾಧ್ಯಮದಲ್ಲೇ (ಇಂಗ್ಲೀಷ್ ಅಥವಾ ಕನ್ನಡ) ನೀವು ಉತ್ತರಗಳನ್ನು ಬರೆಯತಕ್ಕದ್ದು; ಇದನ್ನು ಉತ್ತರ ಪತ್ರಿಕೆಯ ಮುಖಪುಟದಲ್ಲಿ ಪ್ರತ್ಯೇಕವಾಗಿ ನೀಡಲಾದ ಜಾಗದಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಸಂದೇಹ ಉಂಟಾದಲ್ಲಿ, ಇಂಗ್ಲೀಷ್ ಪ್ರಶ್ನೆಪತ್ರಿಕೆಯನ್ನು ದಯವಿಟ್ಟು ಗಮನಿಸಿ.*

*ಈ ಪ್ರಶ್ನೆಪತ್ರಿಕೆಯಲ್ಲಿ ನಾಲ್ಕು ಭಾಗಗಳಿವೆ :*

| | |
|---|---|
| **A** | 20 ಅಂಕಗಳು |
| **B** | 100 ಅಂಕಗಳು |
| **C** | 90 ಅಂಕಗಳು |
| **D** | 90 ಅಂಕಗಳು |

*ಪ್ರತಿ ಪ್ರಶ್ನೆಗೂ ನಿಗದಿಸಲಾದ ಅಂಕಗಳನ್ನು ಒಂದೊಂದು ಭಾಗದಲ್ಲಿಯೂ ನಮೂದಿಸಲಾಗಿದೆ.*

*ಭಾಗ A, B ಮತ್ತು C ಯಲ್ಲಿನ ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಿ.*
*ಭಾಗ D ಯಲ್ಲಿಯ ಯಾವುದಾದರೂ ಮೂರು ಪ್ರಶ್ನೆಗಳನ್ನು ಉತ್ತರಿಸಿ.*

**Note :** *The English version of the instructions is printed on the front cover of this question paper.*

SEAL